

ಕೆ.ಜಿ.ಎಫ್.ನಲ್ಲಿ ಗತವೈಭವದ ಅವಶೇಷಗಳಿನ್ನೂ ಗಟ್ಟಿಯಾಗಿಯೇ ಉಳಿದುಕೊಂಡಿವೆ

ವರಸೆ ಬದಲಿಸಿದ. ಪ್ರಭಾವವನ್ನು ಬೀರಿ, ಕೊನೆಗೂ ಗಣಿಗಾರಿಕೆಗೆ ಸರ್ಕಾರದಿಂದ ಪರವಾನಗಿ ಪಡೆದುಕೊಳ್ಳಲು ಯಶಸ್ವಿಯೂ ಆದ. ಆದರೆ ಪರವಾನಗಿ ಸಿಕ್ಕಿದ್ದೇ, ಗಣಿ ಹಕ್ಕನ್ನು ಬೇರೆಯವರಿಗೆ ಮಾರಾಟ ಮಾಡಿಬಿಟ್ಟ.

ಲ್ಯಾವೆಲ್ಲೆಯಿಂದ ಕೋಲಾರ ಗಣಿಹಕ್ಕು ಖರೀದಿಸಿದ್ದ ಗಣಿ ಕಂಪನಿ ಸ್ವಲ್ಪ ಬಂಡವಾಳ ಹೂಡಿ ಆಸ್ಟ್ರೇಲಿಯಾದ ಗಣಿತಜ್ಞರನ್ನು ಕರೆತಂದು ಕಾರ್ಯಾಚರಣೆ ಪ್ರಾರಂಭಿಸಿತು. ಆದರೆ ಬಂಡವಾಳದ ಕೊರತೆಯಿಂದ ಹೆಚ್ಚು ಮುಂದುವರಿಯಲು ಸಾಧ್ಯವಾಗಲಿಲ್ಲ. ಒಳ್ಳೆಯ ಗುಣಮಟ್ಟದ ಚಿನ್ನ ಇಲ್ಲಿಯ ಅದಿರಿನಲ್ಲಿದೆ ಎಂಬ ಅಂಶ ಅವರಿಗೆ ಗೊತ್ತಾಗಿದ್ದರಿಂದ ಮತ್ತೆ ಆ ಕಂಪನಿ ಹೆಚ್ಚಿನ ಬಂಡವಾಳದೊಂದಿಗೆ ಗಣಿಗಾರಿಕೆ ಶುರುವಿಟ್ಟುಕೊಂಡಿತು. ಕೆ.ಜಿ.ಎಫ್. ಗಣಿಗಳು ಚಿನ್ನದ ಮೊಟ್ಟೆ ಇಡುವ ಕೋಳಿ ಎಂಬುದು ಸಾಬೀತಾಗಿದ್ದರಿಂದ ಬೇರೆ ಬೇರೆ ಕಡೆಗಳಿಂದಲೂ ಬಂಡವಾಳ ಹರಿದುಬಂತು. ಇನ್ನೂ ಒಂದೆರಡು ಕಂಪನಿಗಳು ಅಸ್ತಿತ್ವಕ್ಕೆ ಬಂದು, ಇಲ್ಲಿ ಗಣಿ ಗುತ್ತಿಗೆ ಪಡೆದುಕೊಂಡವು.

ಆಳದಲ್ಲಿ ಗಣಿಗಾರಿಕೆಗೆ ಅನುಕೂಲವಿಲ್ಲದ ವಾತಾವರಣ, ನೀರಿನ ಕೊರತೆ, ರೋಗಗಳ ಹಾವಳಿ – ಇವೆಲ್ಲದುರ ಪರಿಣಾಮ ಶೈಶವಾವಸ್ಥೆಯಲ್ಲಿಯೇ ಗಣಿ ಕಂಪನಿ ಕಣ್ಮುಚ್ಚುವ ಸನ್ನಿವೇಶ ಎದುರಾಯಿತು.

## ಜಾನ್ ಟೇಲರ್ ಜಮಾನ

ಜಾನ್ ಟೇಲರ್ ಒಬ್ಬ ಗಣಿತಜ್ಞ. ದಕ್ಷಿಣ ಆಫ್ರಿಕಾ, ಕ್ಯಾಲಿಫೋರ್ನಿಯಾ ಮೊದಲಾದ ಕಡೆಗಳಲ್ಲಿ ಚಿನ್ನದ ಗಣಿ ನಡೆಸಿದ ಅನುಭವಿ. ಅವನು ಕೆ.ಜಿ.ಎಫ್. ಚಿನ್ನದ ಗಣಿಯನ್ನು ಮುನ್ನಡೆಸುತ್ತಿದ್ದ ಕಾಲದಲ್ಲಿಯೇ ಗಣಿ ಮುಚ್ಚುವ ಪರಿಸ್ಥಿತಿ ಬಂತು. ಇದ್ದ ಬಂಡವಾಳವನ್ನು ಹಂಚಿಕೊಂಡು, ಗಣಿಗಳಿಗೆ ಬೀಗ ಜಡಿಯಲು ನಿರ್ಧರಿಸಿದ ಸಭೆಯಲ್ಲಿ ಜಾನ್ ಟೇಲರ್, ಗಣಿ ಕಣ್ಮುಚ್ಚಲು ಅವಕಾಶ ನೀಡದೆ ಮುಂದಿನ ಸದವಕಾಶಗಳನ್ನು ತೋರಿಸಿದ.

ಗಣಿಗಳ ಬಗೆಗೆ ಸಾದ್ಯಂತ ಪರಿಶೀಲನೆಗೆ ತೊಡಗಿದ ಟೇಲರ್‌ಗೆ ಮುಂದಿನ ಯಶಸ್ಸು ಬಹುಬೇಗನೇ ಕಂಡಿತು. ಅಗೆದು ತೆಗೆದ ಕೆ.ಜಿ. ಎಫ್. ಅದಿರಿನಲ್ಲಿ ಚಿನ್ನದ ಅಂಶ ಹೆಚ್ಚಾಗಿ ಸಿಗುವುದೆಂಬ ಮುನ್ಸೂಚನೆ ಸಿಕ್ಕಾಗ ಟೇಲರ್ ಗೆಲುವಿನ ನಗೆ ಬೀರಿದ್ದ. ಟೇಲರ್ ಕೆ.ಜಿ.ಎಫ್. ಚಿನ್ನದ ಗಣಿಗಳಿಗೆ ಹೊಸ ಮಾರ್ಗ ತೋರಿದ್ದೇ ಅಲ್ಲದೆ ನವ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ ಹೆಚ್ಚಿನದನ್ನು ಸಾಧಿಸಬಹುದು ಎಂಬ ಸಾಧ್ಯತೆಯನ್ನೂ ತೆರೆದಿಟ್ಟ.

1885ರಿಂದಾಚೆಗೆ ಕೆ.ಜಿ.ಎಫ್. ಗಣಿಗಾರಿಕೆ ದಿಕ್ಕು ಬದಲಾಯಿತು.


ಕೋಲಾರ ಹೇಳಿ ಕೇಳಿ ಗುಡ್ಡ ಬೆಟ್ಟಗಳೇ ಹರಡಿ ನಿಂತಿರುವ ಸೀಮೆ. ದೊಡ್ಡ ದೊಡ್ಡ ಬಂಡೆಗಳನ್ನು ವಿಚಿತ್ರಾಕಾರದಲ್ಲಿ ಜೋಡಿಸಿಟ್ಟಂತಿರುವ ಈ ಜಿಲ್ಲೆಯ ಭೂಮಿ ಬಹುತೇಕ ನೈಸ್ ಕಣಶಿಲೆಯ ಪ್ರದೇಶ. ಶ್ರೀನಿವಾಸಪುರದಿಂದ ಶುರುವಾಗಿ ದಕ್ಷಿಣಾಭಿಮುಖವಾಗಿ ಜಿಲ್ಲೆಯ ಅಂಚಿನವರೆಗೆ ಅಂದಾಜು 6 ಕಿ.ಮೀ. ಅಗಲದ ಶಿಷ್ಟ್ ಕಲ್ಲಿನ ಪಟ್ಟಿಯೊಂದು ನೆಲದಾಳದಲ್ಲಿ ಹಬ್ಬಿದೆ. ಈ ಕಲ್ಲಿನ ಪಟ್ಟಿ ಇರುವ ಜಾಗದಲ್ಲಿ ಬೆಣಚುಕಲ್ಲು, ಜಂಬುಮಣ್ಣು, ಕೆಂಪು ಕಲ್ಲುಮಿಶ್ರಿತ ಮಣ್ಣು ಈ ಪಟ್ಟಿಯ ಜೊತೆ ಹಬ್ಬಿದೆ. ಕೆ.ಜಿ.ಎಫ್. ಚಿನ್ನದ ಭೂನಿಕ್ಷೇಪಗಳು ಹಬ್ಬಿರುವುದೂ ಇದರ ಜೊತೆಯಲ್ಲಿಯೇ.

ಕೆ.ಜಿ.ಎಫ್.ನ ಕಪ್ಪು ನೆಲದಲ್ಲಿ ಬಂಗಾರವಿದೆಯೆಂದು ಬಹುಹಿಂದೆಯೇ ಸ್ಥಳೀಯರು ಪತ್ತೆ ಹಚ್ಚಿ, ಹೆಚ್ಚಿನ ಆಳಕ್ಕೆ ಹೋಗದೆ ಅದಿರು ಹೊರತಂದು ಚಿನ್ನ ಸೋಸುವ ಕೆಲಸಕ್ಕೆ ಮೊದಲಿಟ್ಟಿದ್ದರು. ಆದರೆ ಇಲ್ಲಿ ಗಣಿ ಉದ್ಯಮ ಪ್ರವರ್ಧಮಾನಕ್ಕೆ ಬಂದಿದ್ದು 18ನೇ ಶತಮಾನದ ಕೊನೆ ಹಾಗೂ 19ನೇ ಶತಮಾನದ ಶುರುವಿನಲ್ಲಿ. ಒಂದಲ್ಲ ಎರಡಲ್ಲ, ಹನ್ನೊಂದು ಕಂಪನಿಗಳು ಕೆ.ಜಿ. ಎಫ್.ನಲ್ಲಿ ಗಣಿ ಗುತ್ತಿಗೆ ಪಡೆದಿದ್ದವು. ಕೊನೆಗೆ 22 ಕಂಪನಿಗಳು ಇಲ್ಲಿ ತಲೆ ಎತ್ತಿದ್ದವು. ಚಿನ್ನ – ಲಾಭ ತರುವ ಖನಿಜವಾದರೂ ಅದನ್ನು ನೆಲದೊಳಗಿಂದ ಹೊರತೆಗೆದು ಪರಿಷ್ಕಾರ ಮಾಡಿ ಅಪರಂಜಿಯನ್ನು ಸಿದ್ಧಗೊಳಿಸುವುದು ತುಂಬಾ ತ್ರಾಸದಾಯಕ, ಅಪಾರ ಶ್ರಮ ಬೇಡುವ ಕಾಯಕ.

ಹಳೆಯ ಗಣಿಗಳಿಂದ ಸಂಗ್ರಹಿಸಿದ ಅದಿರಿನಿಂದ ಒಳ್ಳೆಯ ಚಿನ್ನ ಸಿಗುವ ನಿರೀಕ್ಷೆ ಹುಟ್ಟಿತಾದರೂ ಹೊಸ ಗಣಿಗಳನ್ನು ತೆಗೆಯುವ ಸಾಹಸ ಸುಲಭದ್ದಾಗಿರಲಿಲ್ಲ. ಸ್ಥಳೀಯರಂತೂ ಗಣಿ ತೋಡಲು ಒಲ್ಲೆ ಎಂದುಬಿಟ್ಟರು.

## ಚಿನ್ನದ ಹೊಳಪಿಗೆ ಜೀವ ತೆತ್ತವರು

ಇಡೀ ಭಾರತವನ್ನೇ ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದ ಬ್ರಿಟಿಷರು ಚಿನ್ನದಂತಹ ಸಂಪತ್ತು ಪಡೆಯಲು ಕೆ.ಜಿ.ಎಫ್. ಆಸುಪಾಸಿನ ಗ್ರಾಮೀಣರನ್ನೇ ಎಳೆದು ತಂದು ಗಣಿ ಕೆಲಸಕ್ಕೆ ಹಚ್ಚಲು ತಡ ಮಾಡಲಿಲ್ಲ. ತಮಿಳುನಾಡು, ಆಂಧ್ರಪ್ರದೇಶಗಳ ಶ್ರಮಜೀವಿಗಳು ಕೆ.ಜಿ.ಎಫ್.ಗೆ ಬಂದು ನೆಲೆ ನಿಲ್ಲಬೇಕಾಯಿತು. ನೆಲದೊಳಗಿನ ಅದಿರು ತರಲು ಗಣಿ ಕಾರ್ಮಿಕರನ್ನು ಗಣಿಗಳಿಗೆ ಇಳಿಸಿ, ಅವರಿಂದ ಅಪಾಯಕಾರಿ ಕೆಲಸ



ಕೆ.ಜಿ.ಎಫ್. ತ್ಯಾಜ್ಯಗಳದ್ದೇ ಒಂದು ಗುಡ್ಡವಾಗಿದೆ